ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.ಃ 54/2020</u>

.........................................................................

CW 07
PW 06

ಹೆಸರು : ವೆಂಕಪ್ಪ ಕಾಲಕುಂದ್ರಿ
ತಂದೆಯ ಹೆಸರು : ರಾಮಾ
ವಯಸ್ಸು : 39 ವರ್ಷ
ಉದ್ಯೋಗ : ರೈತಾಪಿ ಕೆಲಸ
ವಾಸಸ್ಥಳ : ಹಳೇ ಕೊಂಡಪ್ಪ ತಾಃಜೋಯಿಡಾ.

ದಿನಾಂಕ 10-12-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸಹಿಗಳನ್ನು ಗುರುತಿಸಲು ಸೂಚಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಶವ ಪಂಚನಾಮೆ ವರದಿ ಇದ್ದು ಅದನ್ನು ನಿಪಿ 8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 8 ಎ ಮತ್ತು 8 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಿದ್ದು ಅವುಗಳಲ್ಲಿ ತಾನು ಕಂಡು ಬರುತ್ತೇನೆ ಎನ್ನುತ್ತಾರೆ ಅವುಗಳನ್ನು ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು. ನಿಪಿ 8 ಕ್ಕೆ ಸುಮಾರು 5 ವರ್ಷಗಳ ಹಿಂದೆ ಸಾಯಂಕಾಲ 06-00 ಗಂಟೆಗೆ ಶವ ಪಂಚನಾಮೆಗೆ ಎಸ್ ಡಿ ಎಸ್ ಆಸ್ಪತ್ರೆಯಲ್ಲಿ ಸಹಿ ಮಾಡಿದ್ದೇನೆ. ಸದರಿ ಶವ ನನ್ನ ಅಕ್ಕನ ಮಗ ಶವ. ಆ ಸಮಯದಲ್ಲಿ ಜಾಗದಲ್ಲಿ ಚಾಸಾ 9 ಹಾಗೂ ಚಾಸಾ 8 ರವರು ಇದ್ದರು.

**<u>ಪಾಟೀ ಸವಾಲು :</u>** ಆರೋಪಿ ಪರ ಶ್ರೀ ಎಮ್ ಸಿ ಎಚ್ ವಕೀಲರಿಂದ.

ನನ್ನನ್ನು ಪಂಚನಾಮೆಗೆ ಯಾರೂ ಕರೆದಿರಲಿಲ್ಲ. ನಿಪಿ 8 ರಲ್ಲಿ ಏನು ಬರೆದಿದ್ದಾರೆ ಎಂದು ಓದಿ ನೋಡಿಲ್ಲ. ಅದನ್ನು ಯಾರು ಬರೆದಿದ್ದಾರೆ ಎನ್ನುವುದು ಗೊತ್ತಿಲ್ಲ. ನಾನು ಆಸ್ಪತ್ರೆಗೆ

ಹೋದಾಗ ಶವಕ್ಕೆ ಬ್ಯಾಂಡೇಜ್ ಕಟ್ಟಿದ್ದರು. ಮೃತನು ನನ್ನ ಅಕ್ಕನ ಮಗ ಆಗಿದ್ದರಿಂದ ಶವ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.